# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\3647\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11/01/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನ 1) ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಎ.ನಾರಾಯಣಸ್ವಾಮಿ ಮತ್ತು 2) ಹೊದಲಿ ಗ್ರಾಮ ಪಂಚಾಯತ್‌ನ ಗ್ರೇಡ್-1 ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎನ್.ರಾಮಚಂದ್ರಪ್ಪ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕ್ ಬೂದಿಕೋಟೆ ಹೋಬಳಿ ಅಂಚೆ ಆಲಂಬಾಡಿ ಗ್ರಾಮ ಜಿವಿಕೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ.ರಾಮಚಂದ್ರ ಬಿನ್ ರಾಮಪ್ಪ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನ 1)ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಎ.ನಾರಾಯಣಸ್ವಾಮಿ ಮತ್ತು 2) ಹೊದಲಿ ಗ್ರಾಮ ಪಂಚಾಯತ್‌ನ ಗ್ರೇಡ್-1 ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎನ್.ರಾಮಚಂದ್ರಪ್ಪ (ಇನ್ನು ಮುಂದೆ, '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ವ್ಯಾಪ್ತಿಯಲ್ಲಿರುವ ಹೊದಲಿ ಗ್ರಾಮ ಪಂಚಾಯತ್‌ನಲ್ಲಿ ಜಮಾಬಂದಿ ಮಾಡದೇ, ಸರ್ಕಾರದ ಹಣವನ್ನು ದುಂದುವೆಚ್ಚ ಮಾಡಿ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಹೊದಲಿ ಗ್ರಾಮ ಪಂಚಾಯತ್‌ನಲ್ಲಿ ಜಮಾಬಂದಿ ನಡೆಸಲು ದಿನಾಂಕ:26/12/17ಕ್ಕೆ ದಿನಾಂಕ ನಿಗದಿಪಡಿಸಿ, ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಶ್ರೀನಿವಾಸಪುರ ರವರನ್ನು ನೋಡಲ್

ಅಧಿಕಾರಿಯನ್ನಾಗಿ ನೇಮಿಸಿದೆ. ಅದರನ್ವಯ ಹೊದಲಿ ಗ್ರಾಮ ಪಂಚಾಯತ್‌ನಲ್ಲಿ ಜಮಾಬಂದಿ ನಡೆದಿರುವ ಬಗ್ಗೆ ವರದಿ ಬಂದ ತಕ್ಷಣ ಈ ಕಛೇರಿಗೆ ವರದಿಯನ್ನು ಸಲ್ಲಿಸಲಾಗುವುದೆಂದು ಹೇಳುತ್ತಾ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನ ಪೈಕಿ 14 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ಖಾಲಿ ಇರುವ ಕಾರಣ, ಕಾರ್ಯ ಒತ್ತಡ ಹೆಚ್ಚಾಗಿರುವುದರಿಂದ ಮತ್ತು 2017–18ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕನ್ನು ಸರ್ಕಾರವು ವಸತಿ ಯೋಜನೆಯಲ್ಲಿ ಪೈಲಟ್ ಪ್ರಾಜೆಕ್ಟಾಗಿ ಪರಿಗಣಿಸಿ, ಸುಮಾರು 18000 ಮನೆಗಳನ್ನು ಮಂಜೂರು ಮಾಡಿರುವ ಕಾರಣ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ತಾಲ್ಲೂಕನ್ನಾಗಿ ಘೋಷಣೆ ಮಾಡಿರುವ ಕಾರಣ, ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಹೆಚ್ಚಿನ ಕೆಲಸ ನಿರ್ವಹಿಸಿರುವುದರಿಂದ, ಜಮಾಬಂದಿ ಕಾರ್ಯವನ್ನು ಕಾಲಮಿತಿಯಲ್ಲಿ ಮಾಡಲು ವಿಳಂಬವಾಗಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿ, 2015–16 ಮತ್ತು 2016–17ನೇ ಸಾಲಿನ ಜಮಾಬಂದಿಯ ವರದಿಯನ್ನು ಸಲ್ಲಿಸಿದ್ದಾರೆ.

5. ದೂರಿನ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರಿಂದ ವರದಿಯನ್ನು ಕೇಳಲಾಗಿ, ಸದರಿಯವರು ವರದಿಯನ್ನು ಸಲ್ಲಿಸದೇ ಇದ್ದು, ಅವರ ಸೂಚನೆ ಅನ್ವಯ 1ನೇ ಎದುರುದಾರರು ಜಮಾಬಂದಿ ವರದಿಯ ಪ್ರತಿಯನ್ನು ಸಲ್ಲಿಸಿದ್ದಾರೆ.

6. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಜಮಾಬಂದಿಯ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡದೇ ಪಂಚಾಯತ್ ಕಛೇರಿಯಲ್ಲೇ ಜಮಾಬಂದಿಯನ್ನು ನಡೆಸಿರುವುದಾಗಿ ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಗ್ರಾಮ ಪಂಚಾಯತ್ ಜಮಾಬಂದಿಯ ಉದ್ದೇಶವು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಟಾನ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಿಕೊಳ್ಳುವುದು ಮತ್ತು ಪ್ರೋತ್ಸಾಹಿಸುವುದು, ಪಾರದರ್ಶಕತೆ ಒದಗಿಸುವುದು ಮತ್ತು ನಾಗರೀಕರಿಗೆ ಮಾಹಿತಿ ದೊರಕುವಂತೆ

BD/364/17



ಮಾಡುವುದು, ಸಾರ್ವಜನಿಕ ಕುಂದು ಕೊರತೆ ಪರಿಹಾರ, ಜವಾಬ್ದಾರಿಯನ್ನು ಜಾರಿಗೊಳಿಸುವುದು ಮತ್ತು ಗ್ರಾಮ ಪಂಚಾಯತ್‌ಗಳ ಸ್ಪಂದನಶೀಲ ಆಡಳಿತವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕೆ ಅವಶ್ಯಕವೆಂದು ಕಂಡು ಬರುವ ಎಲ್ಲಾ ಅಗತ್ಯ ಕ್ರಮಗಳನ್ನು ಮಾಡುವುದಾಗಿದೆ. ಗ್ರಾಮ ಪಂಚಾಯತ್‌ಗಳು ವಾರ್ಷಿಕ ಜಮಾಬಂದಿ ನಡೆಸಲು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004ನ್ನು ರಚಿಸಲಾಗಿದ್ದು, ಸದರಿ ನಿಯಮಗಳಲ್ಲಿ ಗ್ರಾಮ ಪಂಚಾಯತ್‌ನ ಜಮಾಬಂದಿಯ ಉದ್ದೇಶಗಳು, ಜಮಾಬಂದಿ ನಿರ್ವಹಣೆ ತಂಡದ ರಚನೆ, ಜಮಾಬಂದಿ ನಿರ್ವಹಣೆ ಕಾರ್ಯಕ್ರಮದ ತಯಾರಿ ಮತ್ತು ಸಂವಹನೆ, ಜಮಾಬಂದಿ ನಿರ್ವಹಣೆ, ಜಮಾಬಂದಿ ನಮೂನೆಗಳು ಮತ್ತು ವಹಿಗಳು, ಜಮಾಬಂದಿ ನಿರ್ವಹಣಾಧಿಕಾರಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಜಮಾಬಂದಿಯ ಸಮಯದಲ್ಲಿ ಗ್ರಾಮಸಭೆಯ ಸದಸ್ಯರಿಗೆ ಮಾಹಿತಿ, ಪಂಚಾಯತ್ ಜಮಾಬಂದಿ ವರದಿ ಮತ್ತು ಜಮಾಬಂದಿ ನಿರ್ವಹಣೆ ನಡೆಸಲು ಹಿರಿಯ ಅಧಿಕಾರಿಗಳ ಕರ್ತವ್ಯದ ಬಗ್ಗೆ ಸವಿವರವಾಗಿ ತಿಳಿಸಿದೆ;

2) ಆದರೆ, ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಸಾರ್ವಜನಿಕರಿಗೆ ತಿಳಿಸದೇ ಜಮಾಬಂದಿ ಕಾರ್ಯಕ್ರಮ ನಡೆಸುತ್ತಿರುವುದು ಮತ್ತು ಜಮಾಬಂದಿ ವರದಿಯ ಮೇಲೆ ಕ್ರಮ ಕೈಗೊಳ್ಳದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಸುತ್ತೋಲೆ ಸಂ:ಗ್ರಾಅಪ 851 ಗ್ರಾಪಂಅ 2017 ದಿನಾಂಕ:31/07/2017ನ್ನು ಕರ್ನಾಟಕ ಸರ್ಕಾರವು ಹೊರಡಿಸಿದೆ. ವಾರ್ಷಿಕ ಜಮಾಬಂದಿ ಕಾರ್ಯಕ್ರಮವನ್ನು ಕಡ್ಡಾಯವಾಗಿ ನಡೆಸಲು ಈ ಕೆಳಕಂಡ ಅಂಶಾವಾರಿನಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ –

1. ತಾಲ್ಲೂಕಿನೊಳಗೆ ಗ್ರಾಮ ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡಗಳನ್ನು ರಚಿಸತಕ್ಕದ್ದು;
2. ತಾಲ್ಲೂಕ್ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಜಮಾಬಂದಿ ನಡೆಸಲು ಪ್ರತಿ ವರ್ಷದ ಆಗಸ್ಟ್ 16 ರಿಂದ ಸೆಪ್ಟೆಂಬರ್ 15ನೇ ದಿನಾಂಕದೊಳಗಿನ ಅವಧಿಯಲ್ಲಿ ಪಂಚಾಯತ್ ಜಮಾಬಂದಿಯು ಮುಕ್ತಾಯಗೊಳ್ಳುವಂತೆ ವೇಳಾಪಟ್ಟಿಯನ್ನು ರಚಿಸಿ, ಈ ವೇಳಾಪಟ್ಟಿಗೆ ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 30 ದಿನಗಳ ಮುಂಚಿತವಾಗಿ ಸಂವಹನಗೊಳ್ಳತಕ್ಕದ್ದು;

3. ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ಸಾರ್ವಜನಿಕವಾಗಿ ನಡೆಸಲು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎಲ್ಲಾ ವ್ಯವಸ್ಥೆಯನ್ನು ಮಾಡಿರತಕ್ಕದ್ದು;
4. ಪಂಚಾಯತ್ ಜಮಾಬಂದಿ ವೇಳಾಪಟ್ಟಿಯು ಸ್ಥಳೀಯ ಪತ್ರಿಕೆಗಳು, ಜಿಲ್ಲೆಯ ವಾರಪತ್ರಿಕೆಗಳಲ್ಲಿ ಪ್ರಕಟಗೊಳ್ಳತಕ್ಕದ್ದು ಮತ್ತು ಕರಪತ್ರಗಳನ್ನು ಪಂಚಾಯತ್ ಪ್ರದೇಶಗಳಲ್ಲಿ ವಿತರಿಸತಕ್ಕದ್ದು. ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರವೂ ನೀಡತಕ್ಕದ್ದು;
5. ಪಂಚಾಯತ್ ಜಮಾಬಂದಿ ನಿರ್ವಹಣೆಯು ನಿಗಧಿತ ದಿನ ಮತ್ತು ಸಮಯದಲ್ಲಿ ಸಾರ್ವಜನಿಕವಾಗಿ 2 ಅವಧಿಯಲ್ಲಿ ನಡೆಯತಕ್ಕದ್ದು. ಪೂರ್ವಾಹ್ನದ ಅವಧಿಯಲ್ಲಿ ಅಧಿಕಾರಿಯು ಗ್ರಾಮ ಪಂಚಾಯತಿಯ ಎಲ್ಲಾ ಲೆಕ್ಕಗಳು ಮತ್ತು ವಹಿಗಳನ್ನು ತನಿಖೆ ಮಾಡತಕ್ಕದ್ದು ಹಾಗೂ ಅಪರಾಹ್ನದ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿ ಮತ್ತು ಆತನ ತಂಡವು ಆಯ್ದ ಕಾಮಗಾರಿಗಳ ತನಿಖೆ ನಡೆಸತಕ್ಕದ್ದು;
6. ಪಂಚಾಯತ್ ಜಮಾಬಂದಿ ನಿರ್ವಹಿಸಿದ ನಂತರ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯು 2 ಕೆಲಸದ ದಿನಗಳ ಅವಧಿಯೊಳಗೆ ಅಕ್ರಮಗಳು ಮತ್ತು ಹಣಕಾಸು ದುರುಪಯೋಗ, ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ ಯಾವುದೇ ಗುಣಾತ್ಮಕ ಗ್ರಾಮ ಪಂಚಾಯತಿ ಕಾರ್ಯದ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ಹೊಂದಿರುವ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಆತ ಪಂಚಾಯತ್ ಜಮಾಬಂಧಿಯ ಕಾರ್ಯ ಸಾರಾಂಶವನ್ನು ಸಿದ್ಧಪಡಿಸತಕ್ಕದ್ದು;
7. ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯು ಸಿದ್ದಪಡಿಸಿದ ಪಂಚಾಯತಿ ಜಮಾಬಂದಿ ವರದಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗೆ ಮತ್ತು ತಾಲ್ಲೂಕ್ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸತಕ್ಕದ್ದು;
8. ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಮುಂದಿನ ಗ್ರಾಮ ಸಭೆಯಲ್ಲಿ ಜಮಾಬಂದಿ ಅಧಿಕಾರಿಯ ವರದಿಯನ್ನು ಮಂಡಿಸಲು ಕ್ರಮ ತೆಗೆದುಕೊಳ್ಳುವುದು. ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರ ಪತ್ರಿಕೆಯಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವುದು;
9. ವರದಿಯಲ್ಲಿ ಮಾಡಲಾದ ಟಿಪ್ಪಣಿಗಳ ಬಗ್ಗೆ 15 ದಿನಗಳೊಳಗೆ ತಾಲ್ಲೂಕ್ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಮುಂದಿನ ಕ್ರಮ ಕೈಗೊಳ್ಳಲು ಸೂಚನೆ ನೀಡತಕ್ಕದ್ದು;

BD/3647/17



10. ತಾಲ್ಲೂಕ್ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕ್ ಪಂಚಾಯತಿಯ ಮುಂದಿನ ಸಭೆಯಲ್ಲಿ ಜಮಾಬಂದಿ ವರದಿಗಳನ್ನು ಮಂಡಿಸುವುದು;
11. ಪಂಚಾಯತ್ ಜಮಾಬಂದಿ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ಕರೆದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕರೆದ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಮೊದಲ ವಿಷಯವಾಗಿ ಪರಿಶೀಲಿಸತಕ್ಕದ್ದು ಮತ್ತು ಪಂಚಾಯತ್ ಜಮಾಬಂದಿ ವರದಿಯ ಅನುಸರಣೆ ನಡೆಸದಿರುವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು ಮತ್ತು ಶಿಸ್ತಿನ ಕ್ರಮ ಜರುಗಿಸತಕ್ಕದ್ದು;
12. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉಪ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ ಅವರು ಪಂಚಾಯತ್ ಜಮಾಬಂದಿಯನ್ನು ತಾಲ್ಲೂಕಿನಲ್ಲಿ ಕನಿಷ್ಠ 2 ಗ್ರಾಮ ಪಂಚಾಯತ್‌ಗಳಲ್ಲಿ ನಡೆಸತಕ್ಕದ್ದು;
13. ಜಮಾಬಂದಿ ನಡೆಸಿದ ದಿನಾಂಕ ಹಾಗೂ ವಿವರಗಳನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳು ಪಂಚತಂತ್ರದಲ್ಲಿ ತಪ್ಪದೆ ಅಳವಡಿಸುವುದು.

3) ಮೇಲೆ ಹೇಳಿದ ಸುತ್ತೋಲೆಯಲ್ಲಿ ಸೂಚಿಸಿದನ್ವಯ ಅಂಶ–1ರನ್ವಯ ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡಗಳನ್ನು ರಚಿಸಲು ಕಾರ್ಯನಿರ್ವಾಹಕ ಅಧಿಕಾರಿಯು ಕ್ರಮ ತೆಗೆದುಕೊಳ್ಳತಕ್ಕದ್ದು, ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತಿ ವರ್ಷ ಆಗಸ್ಟ್ 16 ರಿಂದ ಸೆಪ್ಟೆಂಬರ್ 15 ದಿನಾಂಕದ ಅವಧಿಯಲ್ಲಿ ಜಮಾಬಂದಿಯು ಮುಕ್ತಾಯಗೊಳ್ಳುವಂತೆ ವೇಳಾ ಪಟ್ಟಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ರಚಿಸತಕ್ಕದ್ದು. ಅಂಶ–4ರನ್ವಯ ಪಂಚಾಯತ್ ಜಮಾಬಂದಿ ವೇಳಾ ಪಟ್ಟಿಯು ಸ್ಥಳೀಯ ಪತ್ರಿಕೆಗಳಲ್ಲಿ, ಜಿಲ್ಲಾ ವಾರಪತ್ರಿಕೆಗಳಲ್ಲಿ ಪ್ರಕಟಗೊಳ್ಳತಕ್ಕದಲ್ಲದೇ, ಕರ ಪತ್ರಗಳನ್ನು ಗ್ರಾಮ ಪಂಚಾಯತ್ ಪ್ರದೇಶಗಳಲ್ಲಿ ವಿತರಿಸಬೇಕು ಮತ್ತು ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರವು ನೀಡತಕ್ಕದ್ದು. ಅಂಶ–8ರನ್ವಯ ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರಪತ್ರಿಕೆಯಲ್ಲಿ ಪ್ರಕಟಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವ್ಯವಸ್ಥೆ ಮಾಡತಕ್ಕದ್ದು. ಪಂಚಾಯತ್ ಜಮಾಬಂದಿ ಅನುಸರಣೆ ನಡೆಸದಿರುವ ವಿಷಯವನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಂಡಿದ್ದು, ವರದಿಯ ಅನುಸರಣೆ ನಡೆಸದಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು, ಸದರಿ ಸುತ್ತೋಲೆಯಲ್ಲಿ ಸೂಚಿಸಿದೆ;

4) ಸದರಿ ದೂರಿನಲ್ಲಿ ಶ್ರೀನಿವಾಸಪುರ ತಾಲ್ಲೂಕ್ ಹೊದಲಿ ಗ್ರಾಮ ಪಂಚಾಯತ್‌ನ ಜಮಾಬಂದಿ ನಡೆಸಲು ದಿ:26/12/17ಕ್ಕೆ ದಿನಾಂಕ ನಿಗಧಿಪಡಿಸಿದೆ ಮತ್ತು ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಶ್ರೀನಿವಾಸಪುರ ರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿದೆ. ಆದರೆ, ಭಾವಚಿತ್ರಗಳು

ಮತ್ತು ಸಿ.ಡಿ ಯನ್ವಯ ಹೊದಲಿ ಗ್ರಾಮ ಪಂಚಾಯತ್‌ನ 2015–16 ಮತ್ತು 2016–17ನೇ ಸಾಲಿನ ಜಮಾಬಂದಿ ದಿನಾಂಕ:26/12/17ರಂದು ನಡೆದಿರುವುದು ಕಂಡು ಬಂದಿದೆ;

5) ಮೇಲೆ ಹೇಳಿದ ಸುತ್ತೋಲೆಯನ್ವಯ 2015–16ನೇ ಸಾಲಿನ ಜಮಾಬಂದಿಯನ್ನು ದಿನಾಂಕ:16/08/2016 ರಿಂದ 15/09/2016ರೊಳಗೆ ಪೂರ್ಣಗೊಳಿಸಬೇಕಿತ್ತು. ಆದರೆ, ಹೊದಲಿ ಗ್ರಾಮ ಪಂಚಾಯತ್‌ನಲ್ಲಿ 2015–16 ಮತ್ತು 2016–17ನೇ ಸಾಲಿನ ಜಮಾಬಂದಿಯನ್ನು ದಿ:26/12/17 ರಂದು ವಿಳಂಭವಾಗಿ ನಡೆಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ;

6) ಸುತ್ತೋಲೆಯ ಅಂಶ–2ರನ್ವಯ ಜಮಾಬಂದಿ ವೇಳಾಪಟ್ಟಿಯನ್ನು 30 ದಿನಗಳ ಮುಂಚಿತವಾಗಿ ಗ್ರಾಮ ಪಂಚಾಯತ್‌ಗೆ ಸಂವಹನ ಮಾಡಿದ ಬಗ್ಗೆ ದಾಖಲೆಗಳಿಲ್ಲ;

7) ಸುತ್ತೋಲೆಯ ಅಂಶ–11ರನ್ವಯ ಪಂಚಾಯತ್‌ನ ಜಮಾಬಂದಿ ವರದಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಮೊದಲ ವಿಷಯವಾಗಿ ಕಾರ್ಯನಿರ್ವಾಹಕ ಅಧಿಕಾರಿಯು ಪರಿಶೀಲಿಸಿದ ಬಗ್ಗೆ ದಾಖಲೆಗಳಿಲ್ಲ;

8) ಸುತ್ತೋಲೆಯ ಅಂಶ–4ರನ್ವಯ ಸದರಿ ಪಂಚಾಯತ್‌ನ ಜಮಾಬಂದಿ ವೇಳಾಪಟ್ಟಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸ್ಥಳೀಯ ಪತ್ರಿಕೆಗಳಲ್ಲಿ, ಜಿಲ್ಲೆಯ ವಾರ ಪತ್ರಿಕೆಗಳಲ್ಲಿ ಪ್ರಕಟಗೊಳಿಸಿದ ಬಗ್ಗೆ ಮತ್ತು ಪಂಚಾಯತ್ ಪ್ರದೇಶಗಳಲ್ಲಿ ಕರ ಪತ್ರಗಳನ್ನು ವಿತರಿಸಿದ ಬಗ್ಗೆ ಹಾಗೂ ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರ ನೀಡಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ;

9) ಸುತ್ತೋಲೆಯ ಅಂಶ–8ರನ್ವಯ ಜಮಾಬಂದಿ ಅಧಿಕಾರಿಯ ವರದಿಯನ್ನು ಅದೇ ದಿನ ಗ್ರಾಮ ಸಭೆಯಲ್ಲಿ ಮಂಡಿಸಿದಂತೆ ನಡವಳಿಯನ್ನು ದಾಖಲಿಸಿದ್ದು, ಸದರಿ ನಡವಳಿಯಲ್ಲಿ 2015–16 ಮತ್ತು 2016–17ನೇ ಸಾಲಿನ ಜಮಾಬಂದಿ ದಿನಾಂಕ:26/12/17ರಂದೇ ನಡೆದಿದೆಯೆಂದು ದಾಖಲಿಸಿದ್ದು, ಜಮಾಬಂದಿ ನಡೆದ ದಿನಾಂಕವನ್ನು ತಿದ್ದಿರುವುದು ಕಂಡು ಬಂದಿದೆ ಮತ್ತು ದಿನಾಂಕ:26/12/17, ಮಂಗಳವಾರವಾಗಿದ್ದರೂ, ಶುಕ್ರವಾರ ಎಂದು ದಾಖಲಿಸಿದೆ. ಇದನ್ನು ಗಮನಿಸಿದ್ದಲ್ಲಿ, ಪಂಚಾಯತ್ ನಡವಳಿಯ ದಾಖಲೆಗಳನ್ನು ಅವಶ್ಯಕತೆಗೆ ತಕ್ಕಂತೆ ತಿದ್ದುಪಡಿ ಮಾಡಿರುವುದು ಸ್ಪಷ್ಟವಾಗಿದೆ;

10) ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರ ಪತ್ರಿಕೆಗಳಲ್ಲಿ ಪ್ರಕಟಿಸಿದ ಬಗ್ಗೆ ದಾಖಲೆಗಳಿಲ್ಲ;

11) ಒಂದನೇ ಎದುರುದಾರರು ದಿನಾಂಕ:09/11/16 ರಿಂದ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, 2ನೇ ಎದುರುದಾರರು ದಿನಾಂಕ:29/04/16 ರಿಂದ ಈವರೆವಿಗೂ ಹೊದಲಿ ಗ್ರಾಮ ಪಂಚಾಯತ್‌ನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಜಮಾಬಂದಿಯನ್ನು ವಿಳಂಭವಾಗಿ ಮಾಡಲು ಸದರಿಯವರುಗಳು ತಮ್ಮ ಆಕ್ಷೇಪಣೆಯಲ್ಲಿ ನೀಡಿರುವ ಸ್ಪಷ್ಟನೆಯನ್ನು ಒಪ್ಪಲಾಗುವುದಿಲ್ಲ;

12) ಕಾರಣ, ಎದುರುದಾರರುಗಳು ಮೇಲೆ ಹೇಳಿದ ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004 ಮತ್ತು ಸುತ್ತೋಲೆಯಲ್ಲಿನ ಅಂಶಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬಂದಿದೆ.

BD/3647/17



8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ, 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.